**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ.36/2024**

**ಚಾ.ಸಾಃ 17, ಪ್ರಾ.ಸಾಃ 06**

| | |
|---|---|
| ಸಾಕ್ಷಿದಾರನ ಹೆಸರು | ಸಂತೋಷ ಕಾಯ್ಕಿಣಿ |
| ತಂದೆಯ ಹೆಸರು | ಆನಂದ ಕಾಯ್ಕಿಣಿ |
| ವಯಸ್ಸು | 43 ವರ್ಷಗಳು |
| ಉದ್ಯೋಗ | ಪೋಲೀಸ್ ವೃತ್ತ-ನಿರೀಕ್ಷಕರು, ಮುರ್ಡೇಶ್ವರ ವೃತ್ತ |
| ವಾಸ್ತವ್ಯ | ಮುರ್ಡೇಶ್ವರ |

**ಸಾಕ್ಷಿಯನ್ನು ದಿನಾಂಕಃ 16-10-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಸಪ್ಟೆಂಬರ್-2023 ರಿಂದ ಫೆಬ್ರುವರಿ-2024 ರವರೆಗೆ ಮತ್ತು ಜೂನ್-2024 ರಿಂದ ನಾನು ಮುರ್ಡೇಶ್ವರ ವೃತ್ತದಲ್ಲಿ ವೃತ್ತನಿರೀಕ್ಷಕನಾಗಿದ್ದು ಈ ಅವಧಿಯಲ್ಲಿ ನಾನು ಹೊನ್ನಾವರ ವೃತ್ತದ ಪ್ರಭಾರ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26-11-2023 ರಂದು ನಾನು ಈ ಕೇಸಿನ ಕಡತವನ್ನು ಚಾಸಾ-15 ರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ತ್ರಿವೇಣಿ ಅಂಬಿಗರವರು ಮೃತಪಟ್ಟಿದ್ದು ಈ ಬಗ್ಗೆ ವರದಿ ಪಡೆದುಕೊಂಡು ಈಗಾಗಲೇ ದಾಖಲಾಗಿದ್ದ ಪ್ರಕರಣದಲ್ಲಿ ಕಲಂ 304(ಎ) ಯನ್ನು ಅಳವಡಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-20 ಎಂದು, ಸಾಕ್ಷಿ ಸಹಿಯನ್ನು ನಿಪಿ-20(ಎ) ಎಂದು, ಗುರುತಿಸಲಾಯಿತು.

ಅದೇ ದಿನ ಚಾಸಾ-16 ರವರಿಗೆ ಮೃತಳ ಶವ ತನಿಖಾ ವರದಿಯನ್ನು ತಯಾರಿಸಿಕೊಂಡು ಬರುವಂತೆ ಜ್ಞಾಪನ ನೀಡಿರುತ್ತೇನೆ. ಅದರಂತೆ ಅವರು ಶವತನಿಖಾ ವರದಿಯನ್ನು ತಂದು ಹಾಜರುಪಡಿಸಿರುತ್ತಾರೆ. ಅದನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-21 ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-1 ರವರ ಮರುಹೇಳಿಕೆ ಪಡೆದಿರುತ್ತೇನೆ.

ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ತಯಾರಿಸಿ, ಸ್ಥಳದ ಫೋಟೋ ತೆಗೆಸಿರುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು, ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-3(ಸಿ) ಎಂದು, ಫೋಟೋಗಳನ್ನು ನೋಡುತ್ತಿದ್ದು ನಿಪಿ-4 ರಿಂದ 10 ಎಂದು ಗುರುತಿಸಲಾಯಿತು.

ಅದೇ ದಿನ ಠಾಣಾ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತಪಡಿಸಿದ ಕಾರನ್ನು ಹಾಗೂ ಅಪಘಾತಕ್ಕೊಳಗಾದ ಬೈಕನ್ನು ಚಾಸಾ-1 ನೋಡಿ ಗುರುತಿಸಿದ್ದು ಪಂಚರ ಸಮಕ್ಷಮ ಫೋಟೋ ತೆಗೆಸಿ

ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-11 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-11(ಸಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ನೋಡುತ್ತಿದ್ದು ನಿಪಿ-12 ರಿಂದ 15 ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-7 ಮತ್ತು 8 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 27-11-2023 ರಂದು ಕಾರಿನ ಮಾಲೀಕರಾದ ಚಾಸಾ-10 ರವರು ಠಾಣೆಗೆ ಹಾಜರಾಗಿದ್ದರಿಂದ ಅವರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಅವರಿಂದ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನೋಟೀಸನ್ನು ನೋಡುತ್ತಿದ್ದು ನಿಪಿ-22 ಎಂದು, ಸಾಕ್ಷಿ ಸಹಿಯನ್ನು ನಿಪಿ-22(ಎ) ಎಂದು, ಉತ್ತರವನ್ನು ನಿಪಿ-23 ಎಂದು ಗುರುತಿಸಲಾಯಿತು. ನಂತರ ಕಾರಿನ ದಾಖಲಾತಿಗಳನ್ನು ಪರಿಶೀಲಿಸಿ ಇಂಡೆಮ್ನಿಟಿ ಬಾಂಡ್ ಪಡೆದು ಕಾರನ್ನು ಆತನ ಸ್ವಾಧೀನಕ್ಕೆ ನೀಡಿರುತ್ತೇನೆ.

ಅದೇ ದಿನ ಆರೋಪಿ ಠಾಣೆಗೆ ಹಾಜರಾಗಿದ್ದು ಆತನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ಅದೇ ದಿನ ಚಾಸಾ-13 ಮತ್ತು 14 ರವರಿಂದ ಕಲಂ 65-ಬಿ ಪ್ರಮಾಣಪತ್ರ ಪಡೆದಿರುತ್ತೇನೆ. ಈಗ ಅವುಗಳನ್ನು ನೋಡುತ್ತಿದ್ದು ನಿಪಿ-24 ಮತ್ತು 25 ಎಂದು ಗುರುತಿಸಲಾಯಿತು.

ದಿನಾಂಕ 06-02-2024 ರಂದು ಮೃತಳ ಪಿಎಂ ವರದಿ ಪಡೆದಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-26 ಎಂದು ಗುರುತಿಸಲಾಯಿತು. ಅದೇ ದಿನ ಗಾಯಾಳುವಿನ ಗಾಯದ ಪ್ರಮಾಣಪತ್ರ ಪಡೆದುಕೊಂಡಿರುತ್ತೇನೆ. ಈಗ ಅದನ್ನು ನೋಡುತ್ತಿದ್ದು ನಿಪಿ-27 ಎಂದು ಗುರುತಿಸಲಾಯಿತು.

ದಿನಾಂಕ 08-02-2024 ರಂದು ಈ ಕೇಸಿನ ಕಡತವನ್ನು ಚಾಸಾ-18 ರವರಿಗೆ ವಹಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು. ಗುರುತಿನ ಬಗ್ಗೆ ತಕರಾರು ಇಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ. ಎನ್. ಸುಬ್ರಹ್ಮಣ್ಯರಿಂದಃ**

ಅಪಘಾತವಾದ ಮರುದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ನಾನು ಹೊನ್ನಾವರ ಠಾಣೆಗೆ ಪ್ರಭಾರ ಕರ್ತವ್ಯದಲ್ಲಿದ್ದು ಮುರ್ಡೇಶ್ವರ ಠಾಣೆಯ ತುರ್ತು ಕೆಲಸಗಳನ್ನು ಮುಗಿಸಿ ಬಂದಿದ್ದರಿಂದ ಮರುದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಸ್ಥಳದಲ್ಲಿ ತೆಗೆದಿರುವ ಫೋಟೋಗಳಲ್ಲಿ ಕಾರಿನ ಬ್ರೇಕ್ ಮಾರ್ಕ ಮತ್ತು ರಕ್ತದ ಕಲೆಗಳು ಇವೆ. ನಿಡಿ-1 ರಲ್ಲಿರುವ ಕಾರು ಅಪಘಾತಕ್ಕೊಳಗಾಗಿರುವ ಕಾರು ಎಂದರೆ ಸರಿ. ನಿಪಿ-4 ಫೋಟೋದ ರೀತ್ಯಾ ಕಾರು ಬಲಬದಿಯಿಂದ ಎಡಬದಿಗೆ ಬಂದಿರುವಂತೆ ಬ್ರೇಕ್ ಮಾರ್ಕಗಳು ಕಂಡುಬಂದಿರುತ್ತವೆ. ಸದರಿ ಬ್ರೇಕ್ ಮಾರ್ಕ ಕಾರಿನ ಯಾವ ಚಕ್ರದ್ದು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಅಪಘಾತ ಸ್ಥಳದ ದಕ್ಷಿಣದಲ್ಲಿ ಒಂದು ಸಂಸ್ಕೃತ ಪಾಠಶಾಲೆ ಇದ್ದು ಅಲ್ಲಿ ಯಾವುದೇ ಸಿಸಿಟಿವಿ ಅಳವಡಿಸಿರುವುದಿಲ್ಲ. ರಸ್ತೆಯ ಪಕ್ಕದಲ್ಲಿ ಕಾಂತಪ್ಪ ಶಾನಭಾಗರವರ ಕಟ್ಟಡದಲ್ಲಿ ಮತ್ತು ಮುಗ್ವಾ

ವಿ.ಎಸ್.ಎಸ್. ಬ್ಯಾಂಕಿನ ಮುಂಭಾಗದಲ್ಲಿ ಸಿಸಿಟಿವಿ ಅಳವಡಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-8 ರ ಫೋಟೋದಲ್ಲಿ ನಾನು ಮತ್ತು ಪಂಚರು ನಿಂತಿರುವ ಸ್ಥಳದಲ್ಲಿ ರಕ್ತ ಒಣಗಿರುವ ಕಲೆ ಇರುತ್ತದೆ. ನಿಡಿ-1 ಮತ್ತು 2 ರಲ್ಲಿ ಯಾವುದೇ ರಕ್ತದ ಕಲೆಗಳು ಇಲ್ಲ ಎಂದರೆ ಫೋಟೋವನ್ನು ಸ್ಪಷ್ಟವಾಗಿ ತೆಗೆದಿಲ್ಲ ಎನ್ನುತ್ತಾರೆ.

ನಿಪಿ-3 ಕಚ್ಚಾ ನಕಾಶೆಯಲ್ಲಿ ತ್ರಿವೇಣಿ ರವರ ರಕ್ತ ಬಿದ್ದ ಸ್ಥಳವನ್ನು ಗುರುತಿಸಿದ್ದೇನೆ. ಅದು ಬೆಂಗಳೂರು ರಸ್ತೆಯ ಎಡಬದಿಗೆ ಉತ್ತರ ದಿಕ್ಕು ಆಗಿರುತ್ತದೆ. ಅಪಘಾತ ಆದ ತಕ್ಷಣ ನಾನು ಘಟನಾ ಸ್ಥಳಕ್ಕೆ ಹೋಗದೇ ಇದ್ದದ್ದರಿಂದ ಅಪಘಾತ ಆದ ತಕ್ಷಣದ ಫೋಟೋ ಅಥವಾ ವಿಡಿಯೋ ತೆಗೆಸಿಲ್ಲ. ಗಾಯಾಳು ಮತ್ತು ಮೃತಳು ಬಿದ್ದ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಅಪಘಾತವು ರಾಷ್ಟ್ರೀಯ ಹೆದ್ದಾರಿಯ ಮಧ್ಯಪಟ್ಟಿಯಿಂದ ಸುಮಾರು 3 ಅಡಿ ಎಡಭಾಗದ ರಸ್ತೆಯಲ್ಲಿ ಆಗಿರುತ್ತದೆ. ನಿಪಿ-4 ಮತ್ತು 5 ಫೋಟೋದಲ್ಲಿರುವ ಟಯರ್ ಮಾರ್ಕ ರಸ್ತೆಯ ಮಧ್ಯಪಟ್ಟಿಯಿಂದ ಬಲಭಾಗಕ್ಕೆ ಸುಮಾರು ಒಂದು ಅಡಿ ದೂರದಿಂದ ಪ್ರಾರಂಭಿಸಿ ಸುಮಾರು 14 ಅಡಿಯಷ್ಟು ಉದ್ದವಿದ್ದು ಕೊನೆಯ ಅಂಚಿನಲ್ಲಿ ಮಧ್ಯಪಟ್ಟಿಯಿಂದ ಬಲಭಾಗಕ್ಕೆ ಸುಮಾರು 3 ಅಡಿ ದೂರದಲ್ಲಿ ಕೊನೆಗೊಂಡಿರುತ್ತದೆ. ನಿಪಿ-4 ಮತ್ತು 5 ಫೋಟೋದಲ್ಲಿ ಬ್ರೇಕ್ ಮಾರ್ಕಗಳು ಮಧ್ಯರಸ್ತೆಯಲ್ಲಿರುವ ಬಿಳಿ ಪಟ್ಟಿಯನ್ನು ದಾಟಿಲ್ಲ ಎಂದರೆ ಸರಿಯಲ್ಲ. ಫೋಟೋದಲ್ಲಿರುವ ಟಯರ್ ಮಾರ್ಕ ಯಾವ ವಾಹನದ್ದು ಅಂತ ನೀವು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೊಳಗಾಗಿರುವ ಬೈಕನ್ನು ನಾನು ಪರಿಶೀಲಿಸಿದ್ದೇನೆ. ಅದು ರೇಸಗೆ ಬಳಸುವ ಬೈಕು ಎಂದರೆ ಆ ಬಗ್ಗೆ ದಾಖಲಾತಿಗಳ ಮೂಲಕ ನನಗೆ ಕಂಡುಬಂದಿಲ್ಲ ಎನ್ನುತ್ತಾರೆ. ಬೈಕಿಗೆ ಸಂಬಂಧಪಟ್ಟ ವಿಮೆ ಮತ್ತು ಡಿ.ಎಲ್. ನ್ನು ನಾನು ಪರಿಶೀಲಿಸಿಲ್ಲ. ಬೈಕ್ ಸವಾರ ತನ್ನ ಬೈಕಿಗೆ ವಿಮೆ ಇಲ್ಲದೇ, ತನಗೆ ಡಿ.ಎಲ್. ಇಲ್ಲದೇ ನಿರ್ಲಕ್ಷತನದಿಂದ ವೇಗವಾಗಿ ಬೈಕ್ ಚಲಾಯಿಸಿಕೊಂಡು ಹೋಗಿ ಅಪಘಾತಪಡಿಸಿಕೊಂಡಿದ್ದರೂ ಮೃತರ ಕುಟುಂಬದವರಿಗೆ ಪರಿಹಾರ ಸಿಗಲಿ ಎಂಬ ಕಾರಣಕ್ಕೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳವನ್ನು ಚಾಸಾ-1 ರವರು ತೋರಿಸಿದ್ದು ಪಂಚರ ಮಾಹಿತಿಯಂತೆ ಪಂಚನಾಮೆ ತಯಾರಿಸಿರುತ್ತೇನೆ. ಚಾಸಾ-1 ಯಾವುದೇ ಸ್ಥಳವನ್ನು ತೋರಿಸಿಲ್ಲ, ನನ್ನ ಇಚ್ಛಾನುಸಾರ ಸ್ಥಳ ಪಂಚನಾಮೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ಸ್ಥಳದಲ್ಲಿ ಸಿಗಬಹುದಾದ ವಿಡಿಯೋ ಮತ್ತು ಫೋಟೋಗಳನ್ನು ಬಿಟ್ಟು ಪ್ರಕರಣಕ್ಕೆ ಅನುಕೂಲವಾಗುವ ಫೋಟೋಗಳನ್ನು ಮಾತ್ರ ತೆಗೆಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**